॥ ಶ್ರೀಃ ॥

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ,

ಉಡುಪಿ.

ಕ್ಷೌರನಿರ್ಣಯಸಂಗ್ರಹ

ಪ್ರಥಮಮುದ್ರಣ ೧೦೦೦.

ಶ್ರೀಕೃಷ್ಣಮುದ್ರಣಾಲಯ, ಉಡುಪಿ.

1933.

ಬೆಲೆ: ೦—೧—೬.

ಪ್ರಸ್ತಾವನೆ.

ಆಸ್ತಿಕರಾದ ಭಾರತೀಯ ಬ್ರಾಹ್ಮಣಾದಿ ಚತುರ್ವರ್ಣದವರಿಗೆ ಚೌಳ ವೆಂಬ ವಪನಕರ್ಮವೂ ಕೂಡ ಷೋಡಶಸಂಸ್ಕಾರಗಳಲ್ಲೊಂದು ಸಂಸ್ಕಾರವೇ ಆಗಿದೆ. ಇಂತಹ ವಪನಕರ್ಮವು ಉಪನಯನ-ವಿವಾಹ-ವ್ರತ-ಯಜ್ಞ ಮೊದಲಾದ ಶುಭಕರ್ಮಗಳ ಆರಂಭದಲ್ಲೂ ಮಾತಾಪಿತೃಗಳ ಉತ್ತರಕ್ರಿಯಾದಿಗಳ ಆರಂಭದಲ್ಲೂ ಅವಶ್ಯ ಕರ್ತವ್ಯ ಕರ್ಮವೇ ಆಗಿದೆ.

ಇಂತಹ ಸಂಸ್ಕಾರವು ವಿಹಿತ ತಿಥಿ ವಾರ ನಕ್ಷತ್ರಾದಿಗಳಲ್ಲಿ ನಡೆಸಿದರೆ ಆಯುಸ್ಸು ಸಂಪತ್ತು ಮೊದಲಾದ ಶುಭಫಲಗಳಿಗೆ ಸಾಧಕವೂ, ವರ್ಜ್ಯ ತಿಥಿ ಮೊದಲಾದವುಗಳಲ್ಲಿ ನಡೆಸಿದರೆ ಆಯುಷ್ಯಾದಿಗಳಿಗೆ ಹಾನಿಕರವೂ ಆದುದರಿಂದ ಈ ವಿಹಿತ ಕ್ಷೌರಕರ್ಮಕ್ಕೆ ಆಯುಷ್ಕರ್ಮವೆಂದೂ ಭದ್ರಾಕರಣವೆಂದೂ ಹೆಸರು ಬಂದಿದೆ.

ಹೀಗೆ ಕ್ಷೌರಮಾಡಿಸಿ ಧರಿಸಿದ ಶಿಖೆಯ(ಜುಟ್ಟ)ನ್ನು ಕಟ್ಟಿಕೊಂಡರೆ ಮಾತ್ರವೆ ಆಚರಿಸಿದ ಕರ್ಮವು ಸಫಲವಲ್ಲದೆ, ಜುಟ್ಟನ್ನು ಬಿಚ್ಚಿಕೊಂಡು (ಕೆಲವು ಅಪರಕ್ರಿಯೆಗಳಲ್ಲಿ ಮಾತ್ರವಲ್ಲದೆ,) ಮಾಡಿದ ಕರ್ಮವೆಲ್ಲವೂ ನಿಷ್ಫಲವು. ಹಾಗೆ ಜುಟ್ಟು ಬಿಚ್ಚಿಕೊಂಡವರೂ, ಸರ್ವಮುಂಡನ ಮಾಡಿಸಿದವರೂ ಇದಿರು ಬಂದರೆ ಅಪಶಕುನವೆಂದೇ ಭಾವಿಸಲ್ಪಡುತ್ತದೆ.

ಶಿಖೆಯೆಂಬುದು ಮರಕ್ಕೆ ಬೇರಿನಂತೆ ದೇಹಕ್ಕೆ ರಕ್ತಸಂಬಂಧದ ಮೂಲವನ್ನು ಸೂಚಿಸತಕ್ಕದ್ದಾದುದರಿಂದ ಪಿತೃಗಳಿಗೆ ಶಿಖೋದಕದಿಂದ ತೃಪ್ತಿಯನ್ನು ಹೇಳಿರುತ್ತಾರೆ. ಹುಟ್ಟಿದಂದಿನಿಂದ ಇದ್ದ ಕೂದಲನ್ನು ಬೆಳೆಸಿಯೆ ಗೋಪಾದದಷ್ಟು ಶಿಖೆಯನ್ನಿಟ್ಟು, ಉಳಿದ ಕೂದಲುಗಳನ್ನು ಕ್ಷೌರ ಮಾಡಿಸಬೇಕೆಂಬ ಪೂರ್ವಜರ ಪದ್ಧತಿಯು ಗೃಹಸ್ಥಾದಿಗಳಿಗೆ ಸರ್ವಮುಂಡನ ನಿಷೇಧ ಮಾಡಿದ್ದುದರಿಂದಲೆ ಸಿದ್ಧವಾದ ಪ್ರಯುಕ್ತ, ಜುಟ್ಟನ್ನು ಕತ್ತರಿಸಿ ಮತ್ತೆ ಬೆಳೆದ ಕೂದಲುಗಳ ನೀರಿನಿಂದ ಪಿತೃಗಳಿಗೆ ನರಕಪ್ರಾಪ್ತಿ

ಯೆಂದು ಬಲ್ಲವರು ಹೇಳುತ್ತಾರೆ. ಶಿಖೆಯೆಂಬುದು ಆರ್ಯರಾದ ಭಾರತೀಯರು ಪೂರ್ವೋತ್ತರ ಜನ್ಮಗಳನ್ನೊಪ್ಪತಕ್ಕ ಆಸ್ತಿಕಮತದವರೆಂಬ ಮೂಲ ತತ್ತ್ವವನ್ನು ತೋರಿಸುವ ಮುಖ್ಯ ಚಿಹ್ನೆಯಾಗಿರುತ್ತದೆ. ಆ ಪ್ರಯುಕ್ತ ಶಿಖೆಯನ್ನೆಂದಿಗೂ ಕ್ಷೌರಮಾಡಿಸಕೂಡದು. ಸ್ಮಶ್ರು(ಗಡ್ಡಮೀಸೆ)ವನ್ನು ಧರಿಸುವದೂ ಧರಿಸದಿರುವದೂ ಆಯಾ ದೇಶಪದ್ಧತಿಯನ್ನು ಅನುಸರಿಸಿಯಿದೆ. 'ನೀಚರೋಮ ನಖಸ್ಮಶ್ರು ನಿರ್ಮಲಾಂಘ್ರಿಮಲಾಯನಃ' ಎಂತ ಶಾಸ್ತ್ರವಿರುವದರಿಂದ ಅವನ್ನು ಧರಿಸದಿರುವದೇ ವಿಶೇಷವೆಂತ ತೋರುತ್ತದೆ.

ಕೆಲ ಆಧುನಿಕ ತತ್ತ್ವಶೋಧಕರು ಹೇಗೆ ಪ್ರಪಂಚದಲ್ಲಿ ಗಿಡಮರ ಬಳ್ಳಿಗಳಿಂದ ಮನುಷ್ಯಾದಿವರ್ಗಕ್ಕೆ ಮಹತ್ತಾದ ಉಪಕಾರವಿದೆಯೊ, ಅದರಂತೆಯೆ ದೇಹದಲ್ಲಿ ಇತರ ಅಂಗಗಳಿಗೆ ತಲೆಕೂದಲು ಮೊದಲಾದ ರೋಮಗಳಿಂದ ಉಪಕಾರವಿರುವುದೆಂದೂ, ತಲೆಕೂದಲುಗಳಿಂದ ಮೆದುಳಿಗೆ ಸಹ ಬಹಳ ಉಪಕಾರವಿರುವುದೆಂದೂ ಊಹಿಸಿರುತ್ತಾರೆ. ಇದಲ್ಲದೆ ಭೂಮಿಗೂ, ಖಗೋಳಕ್ಕೂ, ಈ ಮನುಷ್ಯದೇಹಕ್ಕೂ ಪರಸ್ಪರ ಸಂಬಂಧವಿದೆಯೆಂಬುದು ಶಾಸ್ತ್ರಸಿದ್ಧವಾಗಿದೆ. ಏಕಾದಶೀ ಉಪವಾಸ, ಅಶ್ವತ್ಥ ತುಲಸೀಪ್ರದಕ್ಷಿಣೆ, ಸಂಧ್ಯಾವಂದನ, ಔಪಾಸನ, ಪಂಚಯಜ್ಞ ಇವೇ ಮೊದಲಾದವುಗಳಿಂದ ಏನೇನೂ ಉಪಯೋಗವಿಲ್ಲವೆಂತ ಹೇಳುತ್ತಿದ್ದ ಬಹುಮಂದಿ ಆಧುನಿಕರು ಈಗ ಶೋಧನೆಯಿಂದಲೂ ವಿಚಾರದಿಂದಲೂ ಅವೆಲ್ಲ ಆರೋಗ್ಯಸಾಧನೆಗೆ ಅತ್ಯಾವಶ್ಯಕವಾದವುಗಳೆಂಬದಾಗಿ ಕಂಡು ಅವನ್ನೆಲ್ಲ ಅತ್ಯಾದರದಿಂದ ಆಚರಿಸತೊಡಗಿದ್ದಾರೆ. ಅದರಂತೆ ಕ್ಷೌರಕ್ಕೂ ವಿಧಿ ಇರುತ್ತದೆ. ಇಂಥ ತಿಥಿ ನಕ್ಷತ್ರಗಳಲ್ಲಿ ಕ್ಷೌರಮಾಡಿಸಬಹುದು, ಇಂಥ ಇಂಥವುಗಳಲ್ಲಿ ಮಾಡಿಸಕೂಡದೆಂಬುದನ್ನು ಶಾಸ್ತ್ರವು ವಿಧಿಸಿರುವದು. ಇದು ಕೂಡ ಆರೋಗ್ಯಸಾಧನೆಗೆ ಅನುಕೂಲವಾದುದರಿಂದ ಇದನ್ನು ತಕ್ಕಷ್ಟು ಸ್ಪಷ್ಟಪಡಿಸುವದೆ ಈ **ಕ್ಷೌರನಿರ್ಣಯಸಂಗ್ರಹ**ವೆಂಬ ಚಿಕ್ಕ ಪುಸ್ತಕದ ಉದ್ದೇಶವಾಗಿದೆ.

ಹೀಗೆ ಪೂರ್ವಿಕರ ಮತ್ತು ಆಧುನಿಕರ ಮತದಂತೆ ಶಿಖೆಯನ್ನಿಟ್ಟುಕೊಂಡೇ ಕ್ಷೌರವನ್ನು ಮಾಡಿಸಬೇಕಲ್ಲದೆ ಶಿಖೆಯನ್ನು ಕತ್ತರಿಸಕೂಡದು.

ದೇಹಾಭಿಮಾನವನ್ನು ತೊರೆದ ಸನ್ಯಾಸಿಗಳು ಮುಂತಾದ ಕೆಲವರಿಗೆ ಮಾತ್ರವೇ ಶಿಖಾಸಮೇತ ಮುಂಡನವು ಶಾಸ್ತ್ರವಿಹಿತವಾಗಿದೆ. ಇಂತಹ ಕ್ಷೌರದ ವಿಚಾರವನ್ನು ಆಸ್ತಿಕರೆಲ್ಲರೂ ಸುಲಭವಾಗಿ ತಿಳಿದುಕೊಳ್ಳುವಂತೆ, ಉಡುಪಿ ಸಂಸ್ಕೃತ ಕಾಲೇಜು ಪಂಡಿತ, ಮ. ಶಾ. ಸ. **ಉ. ಶ್ರೀನಿವಾಸಾಚಾರ್ಯರು** ಅನೇಕ ಧರ್ಮಶಾಸ್ತ್ರ ಜ್ಯೋತಿಶ್ಶಾಸ್ತ್ರಗಳಿಂದ ಸಂಗ್ರಹಿಸಿ ಛಾಪಿಸಿ ಪ್ರಕಟಿಸಲು ಕೊಟ್ಟದ್ದಕ್ಕಾಗಿ ಆ ಮಹನೀಯರಿಗೆ ಅನೇಕ ಕೃತಜ್ಞತಾಪೂರ್ವಕ ವಂದನೆಗಳನ್ನರ್ಪಿಸಿರುತ್ತೇನೆ. ಅದನ್ನು ಪ್ರತ್ಯೇಕವಾಗಿ ಛಾಪಿಸಿರುತ್ತೇವೆ. ಆ ಸಂಸ್ಕೃತ ಗ್ರಂಥದ ಕನ್ನಡತಾತ್ಪರ್ಯವೇ ಈ ಪುಸ್ತಕವಾಗಿರುತ್ತದೆ. ಇಂತಹ ಪ್ರಕಟಿತ ನೂತ್ನಸಂಗ್ರಹ ಗ್ರಂಥದಲ್ಲಿ ಹೇಳಿದಂತೆ ಆಸ್ತಿಕಮಹನೀಯರೆಲ್ಲರೂ ಕ್ಷೌರವನ್ನು ಮಾಡಿಸಿ, ವಿಹಿತಫಲಭಾಗಿಗಳಾದಾರೆಂದು ನಂಬುವ,

ಸುಜನ ಪ್ರೇಮಾಕಾಂಕ್ಷೀ,

ಉಡುಪಿ,
ತಾ. 5--6--1933.

ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ.

ಶ್ರೀಃ

ಕ್ಷೌರನಿರ್ಣಯಸಂಗ್ರಹ

ಬ್ರಹ್ಮಚರ್ಯವೇ ಮೊದಲಾದ ಸದಾಚಾರಸಂಪನ್ನನಾದ ಧಾರ್ಮಿಕನು ಕ್ಷೌರಕ್ಕೆ ಎತ್ತಿದ ನಕ್ಷತ್ರ-ವಾರ-ತಿಥಿ-ಮೊದಲಾದವನ್ನು ನೋಡಿಕೊಂಡು ವಿಹಿತದಿನದ ಪೂರ್ವಾಹ್ಣದಲ್ಲಿ ಕ್ಷೌರಿಕನಿಂದ ಕ್ಷೌರಕರ್ಮವನ್ನು ಮಾಡಿಸ ತಕ್ಕದ್ದು.

ಅಂತಹ ಕ್ಷೌರವು ನಿತ್ಯವೆಂದೂ ನೈಮಿತ್ತಿಕವೆಂದೂ ಎರಡು ಪ್ರಕಾರ ವಾಗಿದೆ. ನಿತ್ಯವು, ನೂತ್ನವು ಅನೂತ್ನವೆಂದೆರಡು ವಿಧವಾಗಿದೆ.

ನೂತ್ನವು:– ಹುಟ್ಟಿದ ಮಗುವಿಗೆ ಮೂರನೆವರ್ಷದಲ್ಲಿ ಹೊಸ ದಾಗಿ ಮಾಡುವ ಚೌಳವು.

ಅನೂತ್ನವು:– ಚೌಳದ ಮೇಲೆ ಪ್ರತಿಪಕ್ಷದಲ್ಲೂ ಮಾಡಲ್ಪಡುವ ಕ್ಷೌರವು ಸಾಮಾನ್ಯ ಕ್ಷೌರವೆನಿಸಲ್ಪಡುವುದು.

ನೈಮಿತ್ತಿಕವು:– ತೀರ್ಥಯಾತ್ರಾದಿಗಳಲ್ಲಿ ಮಾಡಲ್ಪಡತಕ್ಕದ್ದು.

ಇಂತಹ ಕ್ಷೌರಕ್ಕೆ ವಿಹಿತ ನಕ್ಷತ್ರ, ವಾರ, ತಿಥಿಗಳೂ, ದಿಕ್ಕು, ಕಾಲ, ಅವಸ್ಥೆಗಳೂ, ತ್ಯಾಜ್ಯನಕ್ಷತ್ರಾದಿಗಳೂ ತಿಳಿಯಲ್ಪಡತಕ್ಕದ್ದೆಂದು ಧರ್ಮ ಶಾಸ್ತ್ರಾದಿಗಳ ಆಧಾರದಿಂದ ಈ ಗ್ರಂಥವು ಸಂಗ್ರಹಿಸಲ್ಪಡುತ್ತದೆ.

ವಿಹಿತಪ್ರಕರಣ.

ನೂತ್ನಕ್ಷೌರ(ಚೌಳ)ದಲ್ಲಿವಿಹಿತನಕ್ಷತ್ರಗಳು:- ಹಸ್ತ, ಅಶ್ವಿನೀ, ಶ್ರವಣ, ರೇವತಿ, ಧನಿಷ್ಠೆ, ಪುನರ್ವಸು, ಪುಷ್ಯ, ಮೃಗಶಿರೇ, ಚಿತ್ರೆ,

ಈ ೯ ನಕ್ಷತ್ರಗಳು ವಿಹಿತ ಪ್ರಶಸ್ತ ಉತ್ತಮ ನಕ್ಷತ್ರಗಳು. ಉತ್ತರೆ, ಉತ್ತರಾಷಾಢ, ಉತ್ತರಾಭಾದ್ರೆ, ಸ್ವಾತಿ, ರೋಹಿಣಿ, ಶತಭಿಷೆ ಎಂದು ೬ ನಕ್ಷತ್ರಗಳು ಮಧ್ಯಮಗಳು. ತಾರಾನುಕೂಲ ಮೊದಲಾದವನ್ನು ನೋಡಿಕೊಂಡು ಈ ಉತ್ತಮ ಅಥವಾ ಮಧ್ಯಮ ನಕ್ಷತ್ರಗಳಲ್ಲಿ ಚೌಲವನ್ನು ಮಾಡಿಸಬಹುದು. ಭರಣಿ, ಕೃತ್ತಿಕೆ, ಆರ್ದ್ರೆ, ಆಶ್ಲೇಷೆ, ಮಖೆ, ಹುಬ್ಬೆ, ವಿಶಾಖೆ, ಅನುರಾಧೆ, ಜ್ಯೇಷ್ಠೆ, ಮೂಲ, ಪೂರ್ವಾಷಾಢ, ಪೂರ್ವಾಭಾದ್ರೆ, ಈ ೧೨ ನಕ್ಷತ್ರಗಳು ನಿಷಿದ್ಧ(ತ್ಯಾಜ್ಯ)ಗಳು.

ಸಾಮಾನ್ಯ ಅನೂತ್ನ ಕ್ಷೌರದಲ್ಲಿ ವಿಹಿತನಕ್ಷತ್ರಗಳು:-ಪುಷ್ಯ, ರೇವತಿ, ಅಶ್ವಿನಿ, ಮೃಗಶಿರೆ, ಜ್ಯೇಷ್ಠೆ, ಹಸ್ತ, ಚಿತ್ರೆ, ಸ್ವಾತಿ, ಪುನರ್ವಸು, ಶ್ರವಣ, ಧನಿಷ್ಠೆ, ಶತಭಿಷೆ, ಈ ನಕ್ಷತ್ರಗಳು ವಿಹಿತಗಳು. ಇವುಗಳಲ್ಲಿ ಜ್ಯೇಷ್ಠೆ, ಸ್ವಾತಿ, ಶತಭಿಷೆ, ಈ ೩ ನಕ್ಷತ್ರಗಳು (ನಿಷಿದ್ಧಗಳಲ್ಲಿ ಜ್ಯೇಷ್ಠೆ, ಮಧ್ಯಮಗಳಲ್ಲಿ ಸ್ವಾತಿ, ಶತಭಿಷೆ) ಗ್ರಾಹ್ಯಗಳೆಂದು ತಿಳಿಯಬೇಕು.

ನಕ್ಷತ್ರಕ್ಷೌರಫಲ:—ಅಶ್ವಿನಿಯಲ್ಲಿ ಸಂತೋಷ, ಭರಣಿಯಲ್ಲಿ ಮರಣ, ಕೃತ್ತಿಕೆಯಲ್ಲಿ ಕ್ಷಯರೋಗ, ರೋಹಿಣಿಯಲ್ಲಿ ರೋಗಪರಿಹಾರ, ಮೃಗಶಿರೆಯಲ್ಲಿ ಸೌಭಾಗ್ಯ, ಆರ್ದ್ರೆಯಲ್ಲಿ ಧನನಾಶ, ಪುನರ್ವಸುವಿನಲ್ಲಿ ಪರಾಕ್ರಮ, ಪುಷ್ಯದಲ್ಲಿ ಬಹುಮಾನ-ಧನಸಿದ್ಧಿಗಳು, ಆಶ್ಲೇಷದಲ್ಲಿ ದೇಹಪೀಡೆ, ಮಖೆಯಲ್ಲಿ ದ್ರವ್ಯನಾಶ, ಹುಬ್ಬೆಯಲ್ಲಿ ರೋಗ, ಉತ್ತರೆಯಲ್ಲಿ ರೋಗಪರಿಹಾರ, ಹಸ್ತದಲ್ಲಿ ತೇಜಸ್ಸಿನವೃದ್ಧಿ, ಚಿತ್ರೆಯಲ್ಲಿ ಸೌಭಾಗ್ಯವೃದ್ಧಿ, ಸ್ವಾತಿಯಲ್ಲಿ ದುಃಖನಾಶ, ವಿಶಾಖೆಯಲ್ಲಿ ದ್ರವ್ಯನಾಶ, ಅನುರಾಧೆಯಲ್ಲಿ ಮಿತ್ರವಿರೋಧ, ಜ್ಯೇಷ್ಠೆಯಲ್ಲಿ ಭೂಮಿನಾಶ, ಮೂಲದಲ್ಲಿ ಸಮೂಲನಾಶ, ಪೂರ್ವಾಷಾಢದಲ್ಲಿ ನಾಶ, ಉತ್ತರಾಷಾಢದಲ್ಲಿ ಸೌಖ್ಯ ಮತ್ತು ಮೈತ್ರ್ಯ, ಶ್ರವಣದಲ್ಲಿ ಸೌಂದರ್ಯ ಮತ್ತು ಮಂಗಳ, ಧನಿಷ್ಠೆಯಲ್ಲಿ ಆಯುಷ್ಯವೃದ್ಧಿ, ಶತಭಿಷೆಯಲ್ಲಿ ಬಲವೃದ್ಧಿ, ಪೂರ್ವಾಭಾದ್ರೆಯಲ್ಲಿ ಮೃತ್ಯು, ಉತ್ತರಾಭಾದ್ರೆಯಲ್ಲಿ ಸುಖಲಾಭ, ರೇವತಿಯಲ್ಲಿ ಹೆಚ್ಚಿನವೃದ್ಧಿ.

ಕ್ಷೌರವಿಹಿತವಾರಗಳು:—ಸೋಮ, ಬುಧ, ಗುರು, ಶುಕ್ರವಾರಗಳು ಕ್ಷೌರಕ್ಕೆ ವಿಹಿತಗಳು.

ವಿಹಿತವಾರಫಲ:—ಬುಧವಾರದಲ್ಲಿ ೫ ತಿಂಗಳ ಆಯುಷ್ಯವೃದ್ಧಿ, ಸೋಮವಾರದಲ್ಲಿ ೭ ತಿಂಗಳ ಆಯುಷ್ಯವೃದ್ಧಿ, ಗುರುವಾರದಲ್ಲಿ ೧೦ ತಿಂಗಳ ಆಯುಷ್ಯವೃದ್ಧಿ, ಶುಕ್ರವಾರದಲ್ಲಿ ೧೧ ತಿಂಗಳ ಆಯುಷ್ಯವೃದ್ಧಿ.

ವಿಹಿತತಿಥಿಗಳು:—ಬಿದಿಗೆ, ತದಿಗೆ, ಪಂಚಮಿ, ಸಪ್ತಮಿ, ತ್ರಯೋದಶಿ ತಿಥಿಗಳು ಕ್ಷೌರಕ್ಕೆ ಪ್ರಶಸ್ತಗಳು.

ವಿಹಿತತಾರೆಗಳು:—ಸಂಪತ್ತು, ಕ್ಷೇಮ, ಸಾಧನ, ಮೈತ್ರ, ಪರಮಮೈತ್ರ, ಈ ಐದುತಾರೆಗಳು ಕ್ಷೌರಕ್ಕೆ ಪ್ರಶಸ್ತಗಳು.

ಕಾಲನಿಯಮ:—ಒಮ್ಮೆ ಕ್ಷೌರವಮಾಡಿಸಿ ೧೫ ದಿನಗಳೊಳಗೆ ಎರಡನೆ ಸಲ ಕ್ಷೌರಮಾಡಿಸುವುದು ಸಂಪತ್ಕರವು. ಒಂದು ತಿಂಗಳ ಮೇಲೆ ಕ್ಷೌರವಮಾಡಿಸುವುದು ಆಯುಷ್ಯಹಾನಿಕರವು.

ವರ್ಜ್ಯಪ್ರಕರಣ.

ಕ್ಷೌರಾವೃತ್ತಿದೋಷ:—ಮಖಾನಕ್ಷತ್ರದಲ್ಲೇ ಐದುಸಲ ಕ್ಷೌರಮಾಡಿಸಿದವನೂ, ಅನುರಾಧೆಯಲ್ಲಿ ಮೂರುಸಲ ಕ್ಷೌರಮಾಡಿಸಿದವನೂ, ರೋಹಿಣಿಯಲ್ಲಿ ಎಂಟುಸಲ ಕ್ಷೌರಮಾಡಿಸಿದವನೂ, ಕೃತ್ತಿಕೆಯಲ್ಲಿ ಆರುಸಲ ಕ್ಷೌರಮಾಡಿಸಿದವನೂ, ಉತ್ತರೆಯಲ್ಲಿ ನಾಲ್ಕುಸಲ ಕ್ಷೌರಮಾಡಿಸಿದವನೂ, ಕೂಡ ತಾನು ಸಾಕ್ಷಾತ್ ಚತುರ್ಮುಖ ಬ್ರಹ್ಮನೆ ಆಗಿದ್ದರೂ ಒಂದು ವರ್ಷ ಬದುಕಲಾರನೆಂದ ಮೇಲೆ ಬೇರೆಯವರಿಗೆ ಹೇಳಬೇಕಾದುದೇನು?

ಅರಸರಿಗೆ ಮತ್ತು ರಾಜಭೃತ್ಯರಿಗೆ ಕ್ಷೌರಾವೃತ್ತಿದೋಷ:-ಇವರಿಗೆ ಹಿಂದೆ ಹೇಳಿದ ಕ್ಷೌರ ವಿಹಿತನಕ್ಷತ್ರದಲ್ಲಿ ಐದನೆ ಐದನೆ ದಿವಸದಲ್ಲಿ ಮುಖಕ್ಷೌರವು ವಿಹಿತವು. ವಿಹಿತನಕ್ಷತ್ರೋದಯದಲ್ಲಾಗಲಿ, ನಕ್ಷತ್ರಾಧಿಪತಿಗಳ ಮುಹೂರ್ತದಲ್ಲಾಗಲೀ, ಮುಖಕ್ಷೌರವು ವಿಹಿತವು.

ಆದರೆ ಕೃತ್ತಿಕೆಯಲ್ಲಿ ೬ ಸಲ, ಅನುರಾಧೆಯಲ್ಲಿ ೩ ಸಲ ರೋಹಿಣಿಯಲ್ಲಿ ೮ ಸಲ, ಮಖೆಯಲ್ಲಿ ೫ ಸಲ, ಉತ್ತರೆಯಲ್ಲಿ ೪ ಸಲ, ಅರಸನು ಹಾಗೇ ನೌಕರನು ಕ್ಷೌರಮಾಡಿಸಿದರೆ ಒಂದು ವರ್ಷ ಅಥವಾ ಒಂದು ವರ್ಷದ ಮೇಲೆ ಬದುಕಲಾರನು.

ನಿಷಿದ್ಧ ತಾರೆಗಳು:—ವಿಪತ್ತು, ವಧೆ, ಪ್ರತ್ಯರೆ, ತನ್ನ ನಕ್ಷತ್ರದಿಂದ ೨೩ನೇ ನಕ್ಷತ್ರ, ಚಂದ್ರಾಷ್ಟಮ (ಎಂಟನೆ ರಾಶಿ) ಕ್ಷೌರಕ್ಕೆ ವರ್ಜ್ಯಗಳು.

ನಿಷಿದ್ಧ ವಾರಗಳು:—ಮಂಗಳ, ಆದಿತ್ಯ, ಶನಿ, ಈ ಮೂರುವಾರಗಳು ಕ್ಷೌರಕ್ಕೆ ವರ್ಜ್ಯಗಳು. ಸ್ತ್ರೀಯರಿಗೆ ಶುಕ್ರವಾರ ವರ್ಜ್ಯ.

ವರ್ಜ್ಯ ವಾರಫಲ:—ಆದಿತ್ಯವಾರದಲ್ಲಿ ಕ್ಷೌರದಿಂದ ೧ ತಿಂಗಳ ಆಯುಷ್ಯಕ್ಷಯ, ಶನಿವಾರದಲ್ಲಿ ೭ ತಿಂಗಳ ಆಯುಷ್ಯಕ್ಷಯ, ಮಂಗಳವಾರದಲ್ಲಿ ೮ ತಿಂಗಳ ಆಯುಷ್ಯಕ್ಷಯ.

ಜಾತಿಭೇದಕ್ಕೆ ವಾರಗಳು:—ಬ್ರಾಹ್ಮಣರಿಗೆ ಆದಿತ್ಯವಾರ ಕ್ಷೌರದಲ್ಲಿ ದೋಷವಿಲ್ಲ. ಕ್ಷತ್ರಿಯರಿಗೆ ಮಂಗಳವಾರ ದೋಷವಿಲ್ಲ. ವೈಶ್ಯರಿಗೂ ಶೂದ್ರರಿಗೂ ಶನಿವಾರ ದೋಷವಲ್ಲ. ಪರಂತು ಶುಭಪ್ರದಗಳೇ ಆಗಿರುತ್ತವೆ. ಮತ್ತು ಸಾಮಶಾಖೆಯವರಿಗೆ ಮಂಗಳವಾರ ಕ್ಷೌರ ದೋಷವಲ್ಲ.

ನಿಷಿದ್ಧ ತಿಥಿಗಳು:—ಪಾಡ್ಯ, ಚತುರ್ಥಿ, ಷಷ್ಠಿ, ಅಷ್ಟಮಿ, ನವಮಿ, ದಶಮಿ ಏಕಾದಶಿ, ದ್ವಾದಶಿ, ಹುಣ್ಣಿಮೆ, ಅಮಾವಾಸ್ಯೆ, ಈ ತಿಥಿಗಳು ನಿಷಿದ್ಧಗಳು. ಒಂದು ಪ್ರಮಾಣದಲ್ಲಿ ಏಕಾದಶಿ ವಿಹಿತವೆಂದಿದ್ದರೂ ಮತ್ತೊಂದರಲ್ಲಿ ನಿಷಿದ್ಧವೇ ಆಗಿದೆ. ದಶಮಿಯು ವಿಹಿತವಾಗಿ ಕಂಡುಬಂದರೂ ದಶಮ್ಯಾದಿ ದಿನತ್ರಯಕ್ಕೆ ಸಂಬಂಧಪಟ್ಟದ್ದರಿಂದ ನಿಷಿದ್ಧವೇ ಆಗಿದೆ.

ಸಾಮಾನ್ಯ ನಿಷೇಧ:—ಪರ್ವತಿಥಿಗಳು, ಪಿತೃಪಕ್ಷ, ಸಂಕ್ರಮಣ, ವ್ಯತೀಪಾತ, ಶ್ರಾದ್ಧತಿಥಿ, ವ್ರತತಿಥಿ ಇವುಗಳೂ ಕ್ಷೌರಕ್ಕೆ ವರ್ಜ್ಯಗಳು.

ಅಗ್ನಿಹೋತ್ರಿವಿಷಯಃ—ಆಹಿತಾಗ್ನಿ(ಅಗ್ನಿಹೋತ್ರಿ)ಯು ದ್ವಾದಶಿ ಅಥವಾ ಪೂರ್ಣಿಮಾ ಪರ್ವತಿಥಿಯಲ್ಲಿಯೂ ಕ್ಷೌರಮಾಡಿಸಬಹುದು. ಇದೇ ರೀತಿ ವಾನಪ್ರಸ್ಥರಿಗೂ ಯತಿಗಳಿಗೂ ನೈಷ್ಠಿಕ ಬ್ರಹ್ಮಚಾರಿಗಳಿಗೂ ಪೂರ್ಣಿಮಾ ಪರ್ವತಿಥಿಯಲ್ಲಿ ಕ್ಷೌರವು ವಿಹಿತವಾಗಿದೆ.

ಯತಿಗಳು ಕಂಕುಳ, ಗುಹ್ಯಪ್ರದೇಶಗಳನ್ನು ಬಿಟ್ಟು ಕುತ್ತಿಗೆಯ ಮೇಲೆ, ಪರಮಹಂಸ ಹಂಸರಾಗಿದ್ದರೆ ಸಂಪೂರ್ಣ ಮುಂಡನ ಮಾಡಿಸಬೇಕು. ತ್ರಿದಂಡಿಗಳಾಗಿದ್ದರೆ ಶಿಖೆಯನ್ನು ಬಿಟ್ಟು ಕ್ಷೌರಮಾಡಿಸಬೇಕು.

ನಿಷಿದ್ಧಮಾಸಃ—ಕುಂಭಮಾಸ, ಕರ್ಕಾಟಕಮಾಸ, ಕನ್ಯಾಮಾಸ, ಧನುರ್ಮಾಸಗಳು ಕ್ಷೌರಕ್ಕೆ ವರ್ಜ್ಯಗಳು.

ಶಿರೋಮುಂಡನನಿಷೇಧಃ—ಅರಸನೂ, ಯೋಗಿಯೂ, ಮುತ್ತೈದೆಯೂ ಶಿರಸ್ಸಿನ ಕ್ಷೌರವನ್ನು ಮಾಡಿಸಬಾರದು. ಅರಸನಿಗೆ ಶ್ಮಶ್ರುಕರ್ಮ (ಮುಖಕ್ಷೌರ)ವು ವಿಹಿತವಾದುದರಿಂದ ಶಿಖಾಸಹಿತವಾದ ಮುಂಡನವನ್ನು ಮಾಡಿಸಬಾರದೆಂದು ಭಾವ. ಯೋಗಿಯು ಜಟಾಮುಂತಾದುದನ್ನು ಧರಿಸ ಬೇಕಾದುದರಿಂದ ಮುಖಕ್ಷೌರಮುಂತಾದ ಯಾವತರದ ಕ್ಷೌರವನ್ನೂ ಮಾಡಿಸಕೂಡದು. ಮುತ್ತೈದೆಯೂ ಕೂಡ ಮುಖಕ್ಷೌರಾದಿ ಯಾವತರದ ಕ್ಷೌರವನ್ನೂ ಮಾಡಿಸಕೂಡದೆಂದು ಭಾವ.

ತಂದೆತಾಯಿಗಳು ಜೀವಿಸುತ್ತಿದ್ದಾಗ ಯಾವ ತೀರ್ಥಯಾತ್ರಾ ಕ್ಷೌರದಲ್ಲೂ ಕೂಡ ಶಿಖಾಸಮೇತ ಕ್ಷೌರವನ್ನು ಮಾಡಿಸಕೂಡದು. ಅದರಂತೆ ಗರ್ಭಿಣೀಪತಿಯೂ ಕೂಡ ತೀರ್ಥಕ್ಷೌರದಲ್ಲೂ ಕೂಡ ಶಿಖಾಸಮೇತ ಕ್ಷೌರವನ್ನು ಮಾಡಿಸಕೂಡದು.

ಕಾಲಾವಸ್ಥೆಗಳ ನಿಷೇಧಃ—ಸ್ನಾನಮಾಡಿದ ಕೂಡಲೆ, ಪ್ರಯಾಣಕ್ಕೆ ಉದ್ಯೋಗಿಸಿ, ಅಲಂಕರಿಸಿಕೊಂಡು, ಅಭ್ಯಂಗ ಮಾಡಿದ ಮೇಲೆ, ಭೋಜನ ಮಾಡಿದ ಮೇಲೆ, ಯುದ್ಧವನ್ನು ಬಯಸಿ, ಆಸನವಿಲ್ಲದೆ,

ಸಂಧ್ಯಾಕಾಲದಲ್ಲಿ, ರಾತ್ರಿಯಲ್ಲಿ, ಬ್ರಾಹ್ಮಣರ ಸಭೆಯಲ್ಲಿ, ಬಾಗಿಲಿನಲ್ಲಿ, ದಾರಿಯಲ್ಲಿ, ಬೀದಿಯಲ್ಲಿ, ಗದ್ದೆಯಲ್ಲಿ, ಕ್ಷೌರವನ್ನು ಮಾಡಿಸಕೂಡದು.

ಉಕ್ತಾಪವಾದ:—ನಿಷಿದ್ಧ ನಕ್ಷತ್ರ ವಾರಾದಿಗಳಲ್ಲಿ ತಿಳಿಯದೆ ಕ್ಷೌರವನ್ನು ಮಾಡಿಸಿಬಿಟ್ಟಲ್ಲಿ ವಿಹಿತ ಪ್ರಶಸ್ತ ತಿಥಿ, ವಾರ, ನಕ್ಷತ್ರ, ಲಗ್ನಾದಿಗಳನ್ನು ನೋಡಿ, ಶುಭತಿಥಿಯಲ್ಲಿ ಬೇಗನೆ ಎರಡನೆ ಸಲ ಕ್ಷೌರವನ್ನು ಮಾಡಿಸತಕ್ಕದ್ದು.

ಒಂದು ಸಲ ಕ್ಷೌರಮಾಡಿಸಿ ತಿರುಗಿ ಒಂದು ಪಕ್ಷದೊಳಗೆ ಕ್ಷೌರ ಮಾಡಿಸಿದರೆ ಸಂಪತ್ತು, ಒಂದು ತಿಂಗಳ ಮೇಲೆ ಕ್ಷೌರಮಾಡಿಸಿದರೆ ಆಯುಷ್ಯಕ್ಷಯವು.

ತಂದೆ, ತಾಯಿ, ಗುರುಗಳು, ಚಿಕ್ಕತಂದೆ, ದೊಡ್ಡತಂದೆ, ಸೋದರ ಮಾವ, ಅಣ್ಣ, ಹೆಂಡತಿಯ ತಂದೆ ತಾಯಿ ಪಿತೃಗಳಂತಿರುವವರು ಇವರುಗಳ ಮರಣ ಸಂಭವಿಸಿದರೆ ಗರ್ಭವತಿಯ ಪತಿಯಾಗಿದ್ದರೂ ಕ್ಷೌರಮಾಡಿಸಬೇಕು, ಎಂದ ಮೇಲೆ ಉಳಿದವರು ಮಾಡಿಸಲೇಬೇಕೆಂದು ಹೇಳಬೇಕಾದುದಿಲ್ಲ. ರಾಜಕಾರ್ಯದಲ್ಲಿ ಗಂಟುಬಿದ್ದವರು ಅರಸನನ್ನಾಶ್ರಯಿಸಿರುವವರು ತಮ್ಮ ಕಾರ್ಯಕ್ಕೆ ಅನುಕೂಲವಾದಂತೆ ನಿಷಿದ್ಧ ತಿಥಿ ವಾರಾದಿಗಳಲ್ಲೂ ಕ್ಷೌರವನ್ನು ಮಾಡಿಸಬಹುದು.

ಬ್ರಹ್ಮಚಾರಿಯ ವಿಷಯ:—ಬ್ರಹ್ಮಚಾರಿಯು ಉಪನಯನವಾದ ಮೇಲೆ ಉಪಾಕರ್ಮವಾಗುವ ತನಕ ಕ್ಷೌರವನ್ನು ಮಾಡಿಸಕೂಡದು. ಮಾಡಿಸಲೇ ಬೇಕಾದ ಅಗತ್ಯ ಬಂದಲ್ಲಿ, ಕ್ಷೌರಮಾಡಿಸಿ, ಸ್ನಾನ ಮಾಡಿದ ಮೇಲೆ ಹೊಸ ಉಪವೀತ ಕೃಷ್ಣಾಜಿನಗಳನ್ನು ಧರಿಸಿ, ಪಂಚಗವ್ಯಪ್ರಾಶನ ಮಾಡಬೇಕು.

ಗರ್ಭಿಣೀಪತಿಯ ವಿಷಯ:—ಗರ್ಭಿಣಿಯ ಗಂಡನು ಕ್ಷೌರ, ಸ್ತ್ರೀಸಂಗ, ತೀರ್ಥಯಾತ್ರೆ, ಏಳನೆ ತಿಂಗಳ ಮೇಲೆ ಶ್ರಾದ್ಧಭೋಜನ, ಇವುಗಳನ್ನು ಬಿಡತಕ್ಕದ್ದು. ಮತ್ತು ಹೆಣದೊಟ್ಟಿಗೆ ಹೋಗುವುದು, ಹೆಣ

ಹೊರುವುದು, ಉಗುರು ತೆಗೆಯುವುದು (ಕ್ಷೌರವು), ಜಗಳಮಾಡುವುದು, ಮನೆಕಟ್ಟುವುದು, ದೂರಪ್ರಯಾಣ, ಪರ್ವತವೇರುವುದು, ಮದುವೆ, ಉಪನಯನ, ಯಜ್ಞ, ಸಮುದ್ರಸ್ನಾನ ಇವುಗಳನ್ನು ಮೂರು ತಿಂಗಳ ಮೇಲೆ ಮಾಡಿದರೆ ಆಯುಷ್ಯಕ್ಷಯವು.

ದಿಕ್ಕಿನ ಕ್ರಮ:—ಕ್ಷೌರಕ್ಕೆ ಪೂರ್ವ ಅಥವಾ ಉತ್ತರದಿಕ್ಕಿಗೆ ಎದುರಾಗಿ ಕುಳಿತುಕೊಳ್ಳಬೇಕು. ಪಾಪಪರಿಹಾರಪೂರ್ವಕ ಪುಣ್ಯವೃದ್ಧಿಗಾಗಿ ಪ್ರಾಯಶ್ಚಿತ್ತ ನಿಮಿತ್ತ ಕ್ಷೌರದಲ್ಲಿ ಮೊದಲು ಬಲಗಿವಿಯಿಂದ ಕ್ಷೌರವನ್ನಾರಂಭಿಸಬೇಕು. ನೂತ್ನಕ್ಷೌರದಲ್ಲಿ ಶಿಖೆಯಿಂದ ತೊಡಗಿ ಶಿಖೆಯಲ್ಲೇ ಅಂತ್ಯಗೊಳಿಸಬೇಕು. ಕ್ಷೌರವನ್ನು ಕ್ಷೌರಿಕನ ಮನೆಯಲ್ಲಿ ಮಾಡಿಸಕೂಡದು.

ಶಿಖಾವಿಷಯ:—ಎಲ್ಲರಿಗೂ ಶಿರಸ್ಸಿನ ಮಧ್ಯದಲ್ಲಿ ಶಿಖೆಯನ್ನಿಡತಕ್ಕದ್ದು. ವಸಿಷ್ಠಗೋತ್ರದವರು ತಲೆಯ ಬಲಭಾಗದಲ್ಲೂ, ಅತ್ರಿ ಮತ್ತು ಕಶ್ಯಪ ಗೋತ್ರದವರು ತಲೆಯ ಎಡಬಲ ಭಾಗಗಳಲ್ಲೂ, ಆಂಗೀರಸ ಗೋತ್ರದವರು ಐದು ಶಿಖೆಗಳನ್ನೂ, ಭೃಗುಗೋತ್ರದವರು ಅನೇಕ ಶಿಖೆಗಳನ್ನೂ, ತಂತಮ್ಮ ಗೋತ್ರಪ್ರವರಸಂಖ್ಯೆಯಷ್ಟು ಶಿಖೆಗಳನ್ನು ಚೌಳದಿಂದ ಉಪನಯನ ತನಕ ಧಾರಣೆ ಮಾಡಬೇಕು. ಉಪನಯನ ದಿನದಲ್ಲಿ ಮಧ್ಯಶಿಖೆಯನ್ನು ಮಾತ್ರ ಇಟ್ಟು ಉಳಿದ ಶಿಖೆಗಳನ್ನು ವಪನ ಮಾಡಿಸಬೇಕು.

ತೀರ್ಥಕ್ಷೌರ:–ಪ್ರಯಾಗದಲ್ಲೂ ಇತರತೀರ್ಥಗಳಲ್ಲೂ ಜುಟ್ಟನ್ನು ಇಟ್ಟುಕೊಂಡೆ ಕ್ಷೌರಮಾಡಿಸತಕ್ಕದ್ದು. ಕುರುಕ್ಷೇತ್ರ, ವಿಶಾಲ ಮತ್ತೂ ಗಯಾಕ್ಷೇತ್ರಗಳಲ್ಲಿ ವಪನವು ವರ್ಜ್ಯವು. ಒಮ್ಮೆ ತೀರ್ಥಯಾತ್ರೆಯಲ್ಲಿ ಕ್ಷೌರಮಾಡಿಸಿ, ಎರಡನೆ ಸಲ ೧೦ ತಿಂಗಳ ಮೇಲೆ ತೀರ್ಥಯಾತ್ರೆ ಮಾಡಿದರೆ ತಿರುಗಿ ಕ್ಷೌರಮಾಡಿಸತಕ್ಕದ್ದು.

ಪ್ರಯಾಗದಲ್ಲಿ ಸುವಾಸಿನಿಯರಿಗೆ:—ಮುತ್ತೈದೆಯರೂ ಕೂಡ ಪ್ರಯಾಗದಲ್ಲಿ ತ್ರಿವೇಣೀಸಂಗಮದಲ್ಲಿ ಎರಡು ಬೆರಳಷ್ಟುದ್ದ ತಲೆಕೂದಲು

ಗಳ ತುದಿಗಳನ್ನು ಮಂತ್ರೋಕ್ತವಾಗಿ ಕತ್ತರಿಸತಕ್ಕದ್ದು. ಇದಕ್ಕೆ ವೇಣೀ ದಾನವೆಂತ ಹೆಸರು. ಅಷ್ಟೇ ಅಲ್ಲದೆ ಇದರಿಂದ ಹೆಚ್ಚಿನ ಕ್ಷೌರವು ಸುವಾಸಿನಿ ಯರಿಗೆ ವಿಹಿತವಾಗಲಿಲ್ಲ.

ಜೀವತ್ಪಿತೃಕರಿಗೆ:—ತಂದೆತಾಯಿಗಳು ಜೀವಿಸಿದ್ದಾಗ ತೀರ್ಥ ಯಾತ್ರೆ, ಯಜ್ಞ, ತಂದೆತಾಯಿಗಳ ಮರಣ, ಇವುಗಳನ್ನು ಹೊರತು ಸರ್ವ ವಪನ ಮಾಡಿಸಿದರೆ ಆತನು ಪಿತೃಘಾತಕನೆನಿಸುವನು, ಅಂದ ಮೇಲೆ ತೀರ್ಥಯಾತ್ರಾ ಯಜ್ಞಾದಿಗಳ ನಿಮಿತ್ತದಿಂದ ಜುಟ್ಟ(ಶಿಖೆಯ)ನ್ನು ಮಾತ್ರ ಬಿಟ್ಟು ಉಳಿದ ಎಲ್ಲ ಕೇಶಗಳನ್ನು ಕ್ಷೌರಮಾಡಿಸಬೇಕೆಂಬುದು ಸಿದ್ಧವು. ಮೂರು ಗಾವುದ ದೂರದಿಂದ ಬಂದವರು ಪ್ರಯಾಗದಲ್ಲಿ ಪ್ರತಿಯೊಂದು ಸಲ ಯಾತ್ರೆಯಲ್ಲೂ ಕ್ಷೌರವನ್ನು ಮಾಡಿಸಬೇಕು. ಇತರ ತೀರ್ಥಗಳಲ್ಲಿ ಪ್ರಥಮಯಾತ್ರೆಯಲ್ಲಿ ಮಾತ್ರವೇ ಕ್ಷೌರವು ಸಾಕೆಂದು ಬಲ್ಲವರಭಿಪ್ರಾಯ.

ಮಾತಾಪಿತೃಮರಣದಲ್ಲಿ:—ತಂದೆ ತಾಯಿಗಳು ರಾತ್ರಿಯಲ್ಲಿ ಸತ್ತರೆ ಆ ದಿನ ದಹನ ಕಾರ್ಯವನ್ನು ಮಾತ್ರ ಮಾಡಬೇಕು. ಕ್ಷೌರ ವನ್ನು ಮರುದಿನವೇ ಮಾಡಿಸಬೇಕು. ಅನೇಕ ಪುತ್ರರಿದ್ದರೂ ಎಲ್ಲರೂ ಕ್ಷೌರಮಾಡಿಸಬೇಕು. ಮಾತಾಪಿತೃ ಮರಣವು ಹಗಲಲ್ಲೇ ಆಗಿದ್ದರೆ ದೈವಾತ್ ದಹನವು ಮಾತ್ರ ರಾತ್ರಿಯಲ್ಲಿ ನಡೆಯುವ ಸಂದರ್ಭದಲ್ಲಿ ರಾತ್ರಿಯ ಮೊದಲನೆ ಯಾಮದೊಳಗೆ ಕ್ಷೌರವು ತ್ಯಾಜ್ಯವಲ್ಲ. ಹಾಗೆಯೇ ಇತರರ ವಿಷಯದಲ್ಲೂ ಕ್ರಿಯಾಕರ್ತರೂ ಕ್ಷೌರಮಾಡಿಸಬೇಕು. ಮೃತನ ಕುಟುಂಬದವರೂ ಬಂಧುಗಳೂ ಹತ್ತನೇ ದಿನ ಕ್ಷೌರಮಾಡಿಸಬೇಕು. ಮೃತಪಟ್ಟ ವರಿಂದ ಚಿಕ್ಕವರೆಲ್ಲರೂ ಕ್ಷೌರವನ್ನು ಅವಶ್ಯ ಮಾಡಿಸಲೇಬೇಕು. ದೊಡ್ಡ ವರಿಗೆ ನಿಯಮವಿಲ್ಲ. ಈ ಕ್ಷೌರನಿಯಮವು ಹತ್ತಿರದಲ್ಲಿದ್ದವರಿಗೆ ಮಾತ್ರ ವಲ್ಲದೆ ದೂರದಲ್ಲಿದ್ದವರಿಗಿಲ್ಲ. ಮರಣಸೂತಕ ವೃದ್ಧಿಸೂತಕಗಳ ಕೊನೆ ದಿನದಲ್ಲೂ ವಿವಾಹದಲ್ಲೂ ಬಂದಿಖಾನೆಯಿಂದ ಬಿಡುಗಡೆಯಾದಾಗಲೂ ನಕ್ಷತ್ರಾದಿಗಳ ನಿಷೇಧವಿದ್ದರೂ ಕ್ಷೌರವು ಕರ್ತವ್ಯವು.

ಮೃತನಪತ್ನಿ ಮೊದಲಾದವರಿಗೆ:–ಪತಿಯ ಮರಣದಲ್ಲಿ ಮೃತನ ಪತ್ನಿಯೂ ಮುಂಡನ ಮಾಡಿಸಬೇಕು. ಪತಿಯ ಮರಣವು ರಾತ್ರಿಯಲ್ಲಾ

ದರೆ ಮರುದಿನ ಕ್ರಿಯಾರಂಭದ ಮೊದಲು ಕ್ರಿಯಾಕರ್ತೃಗಳಂತೆ ಕ್ಷೌರ ಮಾಡಿಸಬೇಕು. ಸ್ತ್ರೀಯರಿಗೆ ಶುಕ್ರವಾರದಲ್ಲಿ ಕ್ಷೌರವು ತ್ಯಾಜ್ಯವು. ಮೃತನ ಪತ್ನಿಯು ಗರ್ಭಿಣಿಯಾಗಿದ್ದರೆ ಪ್ರಸವಾನಂತರದಲ್ಲಿ, ಮುಟ್ಟಾಗಿದ್ದರೆ ಸ್ನಾನಾನಂತರ ಕ್ಷೌರವನ್ನು ಮಾಡಿಸಬೇಕು. ಕ್ರಿಯಾಕರ್ತೃಗಳಿಗೂ ಮೃತನ ಪತ್ನಿಗೂ ಮರಣದಿನದಲ್ಲಿ ಕ್ಷೌರಕ್ಕೆ ಅನನುಕೂಲವಾದಲ್ಲಿ ಮರಣದಿಂದ ಎರಡನೆ ಮೂರನೆ ಅಥವಾ ಐದನೆ ಏಳನೆ ದಿನಗಳಲ್ಲಾದರೂ ಕೊನೆಗೆ ಕ್ರಿಯಾರಂಭದಲ್ಲಾದರೂ ಕ್ಷೌರಮಾಡಿಸಬೇಕು. ವಿಧವೆಯು ಕೂದಲನ್ನು ಬೆಳಸಿಕೊಂಡಳೆಂದರೆ ಪರಲೋಕದಲ್ಲಿ ಆಕೆಯ ಗಂಡನಿಗೆ ನರಕಾದಿ ಬಂಧನವು ಲಭಿಸುವುದರಿಂದ ವಿಧವೆಯಾದವಳು ಶಿಖಾಸಮೇತವಾಗಿ ಶಿರಸ್ಸಿನ ಕ್ಷೌರ ಮಾಡಿಸಬೇಕು. ಕ್ರಿಯಾಕರ್ತನು ಕ್ಷೌರಮಾಡಿಸದೆ ಕ್ರಿಯೆಮಾಡಿದರೆ ಆ ಕ್ರಿಯೆಯು ನಿಷ್ಫಲ. ಮಾತಾಪಿತೃಮರಣ ನಿಮಿತ್ತಕ ಕ್ಷೌರವೂ ೧೦ನೆ ದಿನದ ಕ್ಷೌರವೂ ಸ್ನಾನಾನಂತರವೇ ಕರ್ತವ್ಯವು.

ನೈಮಿತ್ತಿಕಕ್ಷೌರ:—ಗಂಗಾದಿ ತೀರ್ಥಯಾತ್ರೆ, ಸೂರ್ಯಕ್ಷೇತ್ರ, ಮಾತಾಪಿತೃಮರಣ, ಗುರುಮರಣ, ಅಗ್ನಿಹೋತ್ರ, ಯಜ್ಞ, ಈ ಯೇಳು ನಿಮಿತ್ತಗಳಲ್ಲಿ ನಕ್ಷತ್ರಾದಿ ನಿಷೇಧವಿದ್ದರೂ ಕ್ಷೌರಮಾಡಿಸಬೇಕು. ಮತ್ತು ರಾಜಾಜ್ಞೆ, ತಕ್ಕಡಿಯೇರುವುದೇ ಮೊದಲಾದ ಸತ್ಯಪರೀಕ್ಷೆ, ತಲೆಯ ರೋಗ, ಪಾಪಪ್ರಾಯಶ್ಚಿತ್ತ, ಯಜ್ಞದೀಕ್ಷೆ, ವ್ರತಸಮಾಪ್ತಿಯ ಮೇಲೆ, ಬೇರೆ ದುರ್ನಿಮಿತ್ತಗಳು, ಬಂಧಮೋಕ್ಷ, ವಿವಾಹ ಇತ್ಯಾದಿ ನಿಮಿತ್ತಗಳಲ್ಲಿ ಬ್ರಾಹ್ಮಣರ ಸಮ್ಮತಿಯಿಂದ ತಿಥಿ ವಾರಾದಿ ನಿಷೇಧವಿದ್ದರೂ ಕ್ಷೌರವನ್ನು ಮಾಡಿಸಬಹುದು.

ವಿಶೇಷ ವಿಷಯ:—ಶ್ರಾದ್ಧತಿಥಿಯ ಮುಂಚೆ ಆ ಪಕ್ಷದ ಪಾಡ್ಯವನ್ನಾರಂಭಿಸಿಕೊಂಡು ಶ್ರಾದ್ಧಾನಂತರ ಮರುದಿನ (ಪರೇಽಹನಿ) ತರ್ಪಣ ಕೊಡುವ ತನಕ ಕ್ಷೌರ ವರ್ಜ್ಯವೆಂದು ನಮ್ಮ ದೇಶದ ಸಂಪ್ರದಾಯವು.

ಯತಿ ವಿಷಯ:—ವಸಂತಾದಿ ೬ ಋತುಗಳ ಸಂಧಿಕಾಲವೆಂದರೆ ವೈಶಾಖ ಶು. ೧೫, ಆಷಾಢ ಶು. ೧೫, ಭಾದ್ರಪದ ಶು. ೧೫, ಕಾರ್ತಿಕ

ಶು. ೧೫, ಪುಷ್ಯ ಶು. ೧೫, ಫಾಲ್ಗುನ ಶು. ೧೫ ಈ ತಿಥಿಗಳಲ್ಲಿ, ಪರಮಹಂಸಯತಿಗಳು ಕಂಕುಳ ಗುಹ್ಯಪ್ರದೇಶಗಳನ್ನೂ (ತ್ರಿದಂಡಿಗಳು ಕಂಕುಳ ಗುಹ್ಯ ಶಿಖೆಗಳನ್ನೂ) ಬಿಟ್ಟು ಕ್ಷೌರಮಾಡಿಸಬೇಕು. ಈ ಪೂರ್ಣಿಮಾ ತಿಥಿಗಳಲ್ಲಿ ಕ್ಷೌರಮಾಡಿಸಲಶಕ್ತರಾದಲ್ಲಿಯೂ, ಕ್ಷೌರಿಕನು ದೊರೆಯದಿದ್ದಲ್ಲಿಯೂ, ರಾಜ ಚೋರಾದ್ಯುಪದ್ರವ ಒದಗಿದಲ್ಲಿಯೂ ಮರುದಿನ ಅಂದರೆ ಪಾಡ್ಯ ಅಥವಾ ಅದೇ ಕೃಷ್ಣಪಕ್ಷದ ಪಂಚಮಿ ಪರ್ಯಂತ ಮಾಡಿಸಬಹುದಲ್ಲದೆ, ಪೂರ್ಣಿಮೆಯ ಮೊದಲೂ ಬಹುಳ ಪಂಚಮಿಯ ಮೇಲೂ ಕ್ಷೌರ ಮಾಡಿಸಕೂಡದು.

ಕ್ಷೌರಾನಂತರ ಶುದ್ಧಿ:—ನಿತ್ಯಕ್ಷೌರದಲ್ಲಿ ಕ್ಷೌರಮಾಡಿದವನಿಂದ ಆ ಸ್ಥಳವನ್ನು ಗೋಮಯ ಲೇಪನದಿಂದ ಶುದ್ಧಿಮಾಡಿಸಿ, ಮರಳಿ ತಾನೂ ಆ ಸ್ಥಳವನ್ನು ಗೋಮಯ ನೀರಿನಿಂದ ಶುದ್ಧಮಾಡಿ, ಗೋಘೃತ(ದನದ ತುಪ್ಪ)ವನ್ನು ತಲೆಗೆ ಹಚ್ಚಿಕೊಂಡು, ಗೋಮಯ ಮತ್ತು ತುಳಸೀ ಮೃತ್ತಿಕೆಗಳನ್ನು ಪ್ರತಿಸಲ ಹಚ್ಚಿಕೊಂಡು ೨೮ ಸಲ ಕೆರೆ ನದಿ ಮೊದಲಾದವುಗಳಲ್ಲಿ ಅವಗಾಹನ ಸ್ನಾನವ(ಮುಳುಗುವುದ)ನ್ನು ಮಾಡಿ, ತೀರ್ಥಪ್ರಾಶನಮಾಡಿ ದೇಹಶುದ್ಧಿಗಾಗಿ ನಿತ್ಯಜಪದಿಂದ ಹೆಚ್ಚು ಸಂಖ್ಯೆಗಳಿಂದ ಮಂತ್ರಗಳನ್ನು ಜಪಿಸಬೇಕು. ಮರುದಿನ ಅಭ್ಯಂಗಸ್ನಾನವನ್ನೂ ಮಾಡತಕ್ಕದ್ದು. ಸನ್ಯಾಸಿಗಳು ಕ್ಷೌರಮಾಡಿಸಿ ೧೦೮ ಸಲ ಅವಗಾಹನ ಸ್ನಾನ ಮಾಡತಕ್ಕದು.

ಸಂಪೂರ್ಣವು